

## ಪರಿಸರಸ್ನೇಹಿ ಬಣ್ಣ

ರಾಸಾಯನಿಕಯುಕ್ತ ಬಣ್ಣಗಳ ಬಳಕೆಯಿಂದ ಚರ್ಮಕ್ಕೆ ಹಾನಿ, ಆರೋಗ್ಯಕ್ಕೆ ತೊಂದರೆ ಎಂಬ ಕಾರಣಕ್ಕೆ ಈಗೀಗ ಪರಿಸರಸ್ನೇಹಿ ಬಣ್ಣದ ಪುಡಿಗಳು ಬಂದಿವೆ. ನೈಸರ್ಗಿಕ ಉತ್ಪನ್ನ ಬಳಸಿ ಮಾಡುವ ಈ ಬಣ್ಣಗಳನ್ನು ಬಳಸಿದರೆ ಅದು ಅಪಾಯಕಾರಿಯಲ್ಲ. ಅಲ್ಲದೆ ರಾಸಾಯನಿಕಯುಕ್ತ ರಂಗಿನ ಪುಡಿ ಬಳಸಿ ಬಣ್ಣದೋಕುಳಿ ಆಡುವಾಗ ಕಣ್ಣುಗಳಿಗೆ ಸೋಕಿದರೆ ದೃಷ್ಟಿ ಸಮಸ್ಯೆಯೂ ಎದುರಾಗುತ್ತದೆ ಎಂಬುದು ಪರಿಸರಪ್ರಿಯರ ಕಾಳಜಿಯೂ ಹೌದು. ಸಂಭ್ರಮದ ಭರದಲ್ಲಿ ಆರೋಗ್ಯದ ಕಡೆಗೂ ಗಮನಹರಿಸಬೇಕಾದುದು ಮುಖ್ಯ.

ಬಣ್ಣ ಸೇರಿ ಬಿಳಿಯ ಬಣ್ಣವಾಯಿತು ಎಂಬಂತೆ ಶ್ವೇತವರ್ಣದ ಉಡುಪುಗಳು ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ. ಬಿಳಿಯ ಬಣ್ಣದ ಸಲ್ವಾರ್, ಸೀರೆ, ಗೌನ್, ಮಿಡಿ, ಬಿಳಿಯ ಬಣ್ಣದ ಡೆನಿಮ್ ಶಾರ್ಟ್ಸ್, ಬಿಳಿ ಬಣ್ಣದ ಸಲ್ವಾರ್ ಮೇಲೆ ಮಲ್ಟಿಕಲರ್ ದುಪಟ್ಟಾಗಳು, ಬಿಳಿ ವರ್ಣದ ಲಾಂಗ್ ಫ್ರಾಕ್‌ಗಳು, ಶಾರ್ಟ್ ಫ್ರಾಕ್‌ಗಳು, ನೈಲಾನ್, ಪಾಲಿಯೆಸ್ಟರ್, ಟೈ ಡೈ ಕಫ್ತಾನಗಳು, ಪಲಾಜೋಗಳು... ಹೀಗೆ ಎಲ್ಲವೂ ಹೋಳಿ ಹಬ್ಬವನ್ನು ಮತ್ತಷ್ಟು ರಂಗೇರಿಸುತ್ತವೆ.

### ಕೇಶವಿನ್ಯಾಸವೂ, ಹೋಳಿಯೂ...

ಹೋಳಿ ಬರೀ ಬಣ್ಣ ಬಣ್ಣದ ಫ್ಯಾಷನಬಲ್ ಉಡುಪುಗಳಿಗೆ ಮಾತ್ರ ಸೀಮಿತವಾಗಿರದೆ ಕೇಶವಿನ್ಯಾಸಕ್ಕೂ ಸಂಬಂಧ ಹೊಂದಿದೆ. ಪ್ರತಿಷ್ಠಿತ ಕಂಪನಿಗಳ ಹೇರ್ ಡೈನಿಂದ ಕೂದಲಿಗೆ ರೈನ್‌ಬೊ ಕಲರ್ ಎಫೆಕ್ಟ್ ನೀಡಲಾಗುತ್ತಿದೆ. ಕೂದಲು ಉದ್ದವಾಗಿದ್ದರೆ ಕೆಳಭಾಗದಲ್ಲಿ ಕೂದಲಿಗೆ ರೈನ್‌ಬೊ ಕಲರ್‌ನಿಂದ ಆಕರ್ಷಕವಾಗಿ ಕಲರಿಂಗ್ ಮಾಡಲಾಗುತ್ತಿದೆ. ಅಲ್ಲದೆ ಕೂದಲಿನ ಒಂದು ಭಾಗಕ್ಕೆ ಮಾತ್ರ ಮಲ್ಟಿ ಕಲರ್ ಇನ್ನೊಂದು ಭಾಗಕ್ಕೆ ತಲೆಗೂದಲಿನದೇ ಕಪ್ಪು ಕಲರ್ ಹಾಕಿಕೊಂಡು ಫ್ಯಾಷನ್ ಮೆರೆಯುವುದು ಇತ್ತೀಚೆಗಿನ ಟ್ರೆಂಡ್ ಆಗಿದೆ.



ಫ್ಯಾಷನ್‌ಪ್ರಿಯರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ನೇಲ್‌ಆರ್ಟ್‌ನಲ್ಲೂ ಹೋಳಿ ರಂಗು ಮೂಡಿಸಿದ್ದಾರೆ. ಪ್ರತಿ ಹಬ್ಬ, ಪಾರ್ಟಿ, ಫಂಕ್ಷನ್‌ಗಳಿಗೆ ವಿನೂತನವಾಗಿ ನೇಲ್ ಆರ್ಟ್ ಮಾಡಿಸಿಕೊಂಡು ವಿಭಿನ್ನವಾಗಿ ಮಿಂಚುತ್ತಿದ್ದಾರೆ. ಅವರವರ ಅಭಿರುಚಿಗೆ ಅನುಗುಣವಾಗಿ ನೇಲ್ ಆರ್ಟ್ ಕಲಾವಿದರು ಇವರ ಕೈ ಕಾಲುಗಳ ಉಗುರುಗಳ ಮೇಲೆ ಬಣ್ಣದೋಕುಳಿ ಹರಡುತ್ತಿದ್ದಾರೆ. ಈಗಿನ ಫ್ಯಾಷನ್ ಯುಗದಲ್ಲಿ ಮೇಕಪ್, ಪೆಡಿಕ್ಯೂರ್–ಮೆನಿಕ್ಯೂರ್‌ಗೂ ಮಹತ್ವವಿದೆ. ಬಣ್ಣದೋಕುಳಿಯ ಹೋಳಿ ಹಬ್ಬದ ಶುಭಾಶಯಗಳನ್ನು ಕೋರುವ ನೇಲ್‌ಆರ್ಟ್ ಈಗೀಗ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಕೂಡ ಆಗುತ್ತಿದೆ.

### ಉಡುಪಿಗೆ ತಕ್ಕ ಒಡವೆ

ಹೋಳಿ ಪಾರ್ಟಿಗಳಲ್ಲಿ ಧರಿಸುವ ಬಿಳಿವರ್ಣದ ಉಡುಪುಗಳ ಜೊತೆಗೆ ಬಣ್ಣದ ವುಲ್ಲನ್ ದಾರದಿಂದ ತಯಾರಿಸಿದ ಓಲೆಗಳು, ಪಾಂ ಪಾಂ ಬಳೆಗಳು, ಟ್ಯಾಸೆಲ್ ಓಲೆಗಳು, ಬ್ಲಾಕ್ ಮೆಟಲ್, ಸಿಲ್ವರ್ ಮೆಟಲ್ ಲೋಹದ ಆಭರಣಗಳು ಹಬ್ಬಕ್ಕೆ ಇನ್ನಷ್ಟು ಕಳೆ ತರುತ್ತಿವೆ. ಬಣ್ಣ ಬಣ್ಣದ ಪ್ಲಾಸ್ಟಿಕ್ ಬಳೆಗಳು ಹಬ್ಬಕ್ಕೆ ಎಥ್ನಿಕ್ ಲುಕ್ ನೀಡುತ್ತಿವೆ. ದೊಡ್ಡ ಗಾತ್ರದ ವರ್ಣರಂಜಿತ ಜುಮುಕಿಗಳು, ಹಣೆಯಲ್ಲಿ ದೊಡ್ಡ ಗಾತ್ರದ ಬೊಟ್ಟು, ಹೋಳಿ ಹಬ್ಬದ ಮೆರುಗನ್ನು ಇಮ್ಮಡಿಗೊಳಿಸುವುದಂತೂ ಖಂಡಿತ. ಮಣ್ಣಿನ ಮಣಿಗಳಿಂದ ತಯಾರಿಸಿ ಬಣ್ಣದ ಲೇಪನ ನೀಡಿರುವ ಟೆರ್ರಾಕೋಟಾದ ಸರ, ದೊಡ್ಡ ಗಾತ್ರದ ಪೆಂಡೆಂಟ್ ಕೂಡ ಸಾಂಪ್ರದಾಯಿಕ ಹಬ್ಬಕ್ಕೆ ಸಾಕ್ಷಿಯಾಗಿದೆ.

ಸಾಮಾನ್ಯವಾಗಿ ಹೋಳಿ ಹಬ್ಬಕ್ಕೆ ನೀರಿನಲ್ಲಿ ಮಿಂದೇಳುವುದರಿಂದ ಮೇಕಪ್ ಬಳಸುವುದು ವಿರಳ. ಆದರೆ ಇತ್ತೀಚೆಗಿನ ಪಾರ್ಟಿ ಕ್ರೇಜ್‌ನಿಂದಾಗಿ ಮೇಕಪ್ ಟ್ರೆಂಡ್ ಕೂಡ ಸೃಷ್ಟಿಯಾಗಿದೆ. ಹೋಲಿ ಲಿಪ್‌ಆರ್ಟ್, ಐಆರ್ಟ್ ಮಾಡಿಸಿಕೊಂಡು ಪಾರ್ಟಿಯನ್ನು ಇನ್ನೂ ಕಲರ್‌ಫುಲ್ ಮಾಡಲಾಗುತ್ತಿದೆ. ಕಣ್ಣಿಗೆ ಹಳದಿ, ನೀಲಿ, ಪಿಂಕ್, ಹಸಿರು ಬಣ್ಣದ ಐಆರ್ಟ್, ರೈನ್‌ಬೊ ಲಿಪ್‌ಸ್ಟಿಕ್, ವಾಟರ್‌ಪ್ರೂಫ್ ಐಲೈನರ್, ಹೋಳಿ ಹಬ್ಬಕ್ಕೆಂದೇ ತಯಾರಾಗಿ ಬಂದ ಮೇಕಪ್ ಕಿಟ್‌ಗಳು ಫ್ಯಾಷನ್‌ಪ್ರಿಯರನ್ನು ಹೆಚ್ಚು ಹುರಿದುಂಬಿಸಲು ಸಹಕಾರಿಯಾಗಿವೆ.